ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 172/2025

ಸಿ ಡಬ್ಲ್ಯೂ - 6

ಪಿ ಡಬ್ಲ್ಯೂ - 5

ದಿಃ 06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಮಾಧವ ಯಾನೆ ಮಹಾದೇವ ಆಚಾರಿ
ತಂದೆಯ ಹೆಸರುಃ ಕೃಷ್ಣ
ವಯಸ್ಸುಃ 50 ವರ್ಷ
ಉದ್ಯೋಗಃ ಗ್ಯಾರೇಜ್ ಕೆಲಸ
ವಿಳಾಸಃ ಅವರ್ಸಾ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನಾನು 10ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿಯ ಪರಿಚಯ ಇರುವುದಿಲ್ಲ. ಮೃತ ಗೇಣು ಶೇಷು ನಾಯಕ ಇವರ ಪರಿಚಯವಿರುವುದಿಲ್ಲ. ಚಾಸಾ-1 ರಿಂದ 5,7 ರಿಂದ 10 ರವರ ಪರಿಚಯವಿರುವುದಿಲ್ಲ. ಮಾವಿನಕೇರಿ, ಹಟ್ಟಿಕೇರಿ, ಸಕಲಬೇಣ, ಜನತಾ ಕಾಲೋನಿ, ತಾರಿಬೋಳಾ ಇವೆಲ್ಲವೂ ನನ್ನ ಊರಿನ ಅಕ್ಕಪಕ್ಕದ ಊರುಗಳು. ಇವೆಲ್ಲವೂ ಅವರ್ಸಾ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ನಾನು ಯಾವುದೇ ವಾಹನ ಅಪಘಾತವಾಗಿರುವುದನ್ನು ನೋಡಿರುವುದಿಲ್ಲ. ಅದೇ ರೀತಿ ನಾನು ಯಾವುದೇ ಯಾವುದೇ ಅಪಘಾತವಾಗಿ ನೋಡಿರುವುದಿಲ್ಲ ಹಾಗೂ ಅಪಘಾತದ ವಿಚಾರ ಕೇಳಿ

ತಿಳಿದುಕೊಂಡಿರುವುದಿಲ್ಲ. ಅಪಘಾತವು ಯಾವ ರೀತಿ ಆಗಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ, ಮೃತ ಗೇಣು ಶೇಷು ನಾಯ್ಕ ಇವರರು ತೀರಿಕೊಂಡಿರುತ್ತಾರೆ ಎಂದು ಮಾತ್ರ ಗೊತ್ತಿರುತ್ತದೆ. ಆರೋಪಿ ತಪ್ಪಿನಿಂದಲೇ ಅಪಘಾತವಾಗಿ ಗೇಣು ಶೇಷು ನಾಯಕ ಇವರು ಮೃತ ಪಟ್ಟಿರುತ್ತಾರೆ ಎಂದು ನನ್ನನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ. ಹಾಗೂ ಹೇಳಿಕೆಯನ್ನಾಗಲಿ ಅಥವಾ ಮರುಹೇಳಿಕೆಯನ್ನಾಗಲಿ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಆರೋಪಿಯು ನಿಮ್ಮ ಪಕ್ಕದ ಊರಿನವರು ಆಗಿದ್ದು, ಅವರ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 5,7 ಮತ್ತು 10 ರವರು ನಿಮ್ಮ ಊರಿನ ಅಕ್ಕಪಕ್ಕದ ಊರಿನವರು ಆಗಿದ್ದು ಅವರ ಪರಿಚಯವಿದ್ದರೂ ಸಹ ಪರಿಚಯವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ಮೃತ ಗೇಣು ಶೇಷು ನಾಯ್ಕ ಇವರೂ ಸಹ ನಿಮ್ಮ ಪಕ್ಕದ ಊರಿನವರು ಆಗಿದ್ದು, ಅವರ ಪರಿಚಯವಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ದಿಃ 26-06-2024 ರಂದು ಮಧ್ಯಾಹ್ನ 3.30 ಗಂಟೆಯ ಸುಮಾರಿಗೆ ನೀವು ಮನೆಯಲ್ಲಿ ಇದ್ದಾಗ ನಿಮ್ಮ ಪರಿಚಯದ ಮೃತ ಗೇಣು ಶೇಷು ನಾಯಕ ಇವರಿಗೆ ಹಟ್ಟಿಕೇರಿ ಬಾಬು ಗ್ಯಾರೇಜ್ ಅಂಗಡಿ ಹತ್ತಿರ ಮೋಟರ್ ಸೈಕಲ್ ಅಪಘಾತವಾಗಿದೆ

ಎಂದು ನಿಮಗೆ ಸುದ್ದಿ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರ ತಿಳಿದು ನೀವು ಸಹ ಅಪಘಾತ ಸ್ಥಳದಲ್ಲಿ ಹೋಗಿ ನೋಡಿದಾಗ, ಅಲ್ಲಿ ಜನರು ಸೇರಿದ್ದು ಹಾಗೂ ಮೋಟರ್ ಸೈಕಲ್ ನಂ. ಕೆ ಎ 30 ಜೆ 2356 ನೆದ್ದು ಬಿದ್ದುಕೊಂಡಿದ್ದು, ಗಾಯಾಳುಗಳನ್ನು ಅಂಕೋಲಾ ಸರಕಾರಿ ಆಸ್ಪತ್ರೆಗೆ ಉಪಚಾರಕ್ಕೆ ಕಳುಹಿಸಿದ ವಿಷಯ ನಿಮ್ಮ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಬಗ್ಗೆ ಅಲ್ಲಿಯ ಸ್ಥಳೀಯ ಜನರಲ್ಲಿ ವಿಚಾರಿಸಿದಾಗ ದಿಃ26-06-2024 ರಂದು ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಹಟ್ಟಿಕೇರಿ ಗ್ರಾಮದ ಬಾಬು ಗ್ಯಾರೇಜ್ ಹತ್ತಿರ ಹಾಯ್ದಿರುವ ರಾಷ್ಟ್ರೀಯ ಹೆದ್ದಾರಿ-66 ಚತುಷ್ಪತ ರಸ್ತೆಯ ಮೇಲೆ ಮೋಟರ್ ಸೈಕಲ್ ನಂ. ಕೆ ಎ 30 ಜೆ 2356 ನೆದ್ದರ ಸವಾರನಾದ ಆರೋಪಿಯು ತನ್ನ ಬೈಕಿನ ಹಿಂಬದಿ ಸೀಟಿನಲ್ಲಿ ಚಾಸಾ-8 ರವರನ್ನು ಕುಳ್ಳಿಸಿಕೊಂಡು ಕಾರವಾರ ಕಡೆಯಿಂದ ಅಂಕೋಲಾಕಡೆಗೆ ಅತಿ ವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದವನು ತನ್ನ ಚಾಲನೆ ಮೇಲಿನ ನಿಯಂತ್ರಣವನ್ನು ಕಳೆದಕೊಂಡು ರಸ್ತೆಯ ಬದಿಯಲ್ಲಿ ಅವರ್ಸಾ ಕಡೆಯಿಂದ ಹಟ್ಟಿಕೇರಿ ಕಟ್ಟೆಗೆ ಡಿಪೋ ಕಡೆಗೆ ನಡೆದುಕೊಂಡು ಹೋಗುತ್ತಿದ್ದ, ಮೃತ ಗೇಣು ಶೇಷು ನಾಯಕ ಇವರಿಗೆ ಹಿಂದಿನಿಂದ ಡಿಕ್ಕಿ ಹೊಡೆದು, ಅಪಘಾತಪಡಿಸಿ ರಸ್ತೆಯ ಮೇಲೆ ಬೀಳಿಸಿ, ಅವರಿಗೆ ತಲೆಯ ಭಾಗದಲ್ಲಿ ಭಾರಿ ಗಾಯನೋವು ಹಾಗೂ ಆರೋಪಿಯು ಚಾಲಾಯಿಸುತ್ತಿದ್ದ ಬೈಕಿನ ಹಿಂಬದಿ ಸವಾರನಾದ ಚಾಸಾ-8 ರವರಿಗೆ ಹಣೆ, ಬಲಗೈ ಹಾಗೂ ಎಡಕಾಲಿಗೆ ಸಣ್ಣಪುಟ್ಟ ಗಾಯನೋವು ಪಡಿಸಿ, ತನಗೂ ಸಹ ಮುಖ, ಬಲಗಣ್ಣು, ಬಲಕಾಲಿಗೆ ಹಾಗೂ ಬಲಗೈಗೆ ಗಾಯನೋವು ಪಡಿಸಿಕೊಂಡಿದ್ದು, ಸದರಿ ಮೂವರನ್ನು ಅಂಬುಲೆನ್ಸ

ಮುಖಾಂತರ ಉಪಚಾರಕ್ಕೆ ಅಂಕೋಲಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ನೀವು ಸರಕಾರಿ ಅಂಕೋಲಾ ಆಸ್ಪತ್ರೆಗೆ ಹೋಗಿ ನೋಡಲಾಗಿ, ಉಪಚಾರದಲ್ಲಿದ್ದ ಗೇಬು ಶೇಷು ನಾಯಕ ಇವರಿಗೆ ತಲೆಯ ಹಿಂಭಾಗಕ್ಕೆ ಭಾರಿ ಗಾಯನೋವು ಆಗಿದ್ದರಿಂದ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಂತರ ಸರಕಾರಿ ಆಸ್ಪತ್ರೆಯ ವೈದ್ಯರು ಗೇಬು ಶೇಷು ನಾಯಕ ಇವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಿಕಿತ್ಸೆ ಪಡೆದು, ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದ ಬಗ್ಗೆ ನಿಮಗೆ ವಿಷಯ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರೋಪಿಯು ತನ್ನ ವಾಹನವನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದ ಕಾರಣ ಅಪಘಾತ ಸಂಭವಿಸಿದೆ ಎಂದು ವಿಷಯ ತಿಳಿದು, ಸದರಿ ಅಪಘಾತದ ವಿಚಾರವಾಗಿ ಪೊಲೀಸರು ನಿಮ್ಮನ್ನು ವಿಚಾರಿಸಿದಾಗ ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ದಿಃ30-06-2024 ರಂದು ನಿಮ್ಮ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು. ದಿಃ23-07-2024 ರಂದು ಅಪಘಾತದಲ್ಲಿ ಗಾಯಗೊಂಡ ಗೇಬು ಶೇಷು ನಾಯಕ ಇವರು ಮಂಗಳೂರಿನ ವೆನ್ಲಾಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿ, ಅಲ್ಲಿಂದ ಮರಳಿ ಕಾರವಾರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದವರು ರಾತ್ರಿ 12.10 ಗಂಟೆಗೆ ಮೃತ ಪಟ್ಟ ಬಗ್ಗೆ ತಿಳಿದು ಬಂದಿದ್ದು, ಸದರಿ ವಿಚಾರವಾಗಿ ನಿಮ್ಮ

ಮರುಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಮರುಹೇಳಿಕೆಯ ಭಾಗವನ್ನು ನಿಪಿ–16 ಎಂದು ಗುರುತಿಸಲಾಯಿತು. ನಿಪಿ–15 ಮತ್ತು 16 ರಲ್ಲಿ ಬರೆದ ಎಲ್ಲ ವಿಚಾರಗಳ ಬಗ್ಗೆ ನಿಮ್ಮ ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಇದ್ದರೂ, ಸದರಿ ಅಪಘಾತ ಸಂಭವಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಗೇಣು ಶೇಷು ನಾಯ್ಕು ಇವರ ಮರಣಕ್ಕೆ ಸದರಿ ಅಪಘಾತವೇ ಕಾರಣ ಎಂದು ತಿಳಿದು ನೀವು ಅಪಘಾತವನ್ನು ತಿಳಿದ ಬಗ್ಗೆ ಹಾಗೂ ಆರೋಪಿಯ ತಪ್ಪಿನಿಂದಲೇ ಅಪಘಾತ ಸಂಭವಿಸಿದೆ ಎಂದು ನಿಪಿ–15 ಮತ್ತು 16 ರಂತೆ ನಿಮ್ಮ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಆರೊಪಿಯು ನಿಮ್ಮ ಪರಿಚಯಸ್ಥ ಹಾಗೂ ಪಕ್ಕದ ಊರಿನವರು ಆದ ಕಾರಣ ಆರೋಪಿಗೆ ಸಹಾಯವಾಗಲೆಂದು ಅಪಘಾತ ಸಂಭವಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಹಾಗೂ ಚಾಸಾ–1 ಹಾಗೂ ಮೃತನ ಕುಟುಂಬಸ್ಥರು ಸೇರಿ ಸದರಿ ಪ್ರಕರಣವನ್ನು ರಾಜಿ ಮಾಡಿಕೊಂಡ ಕಾರಣ ಅಪಘಾತದ ಬಗ್ಗೆ ಹಾಗೂ ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ತಿಳಿದಿದ್ದರೂ, ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.